**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**

**ಸಿಸಿ ನಂ:90/2017**

ಪಿಡಬ್ಲ್ಯೂ: 6 ಸಿಡಬ್ಲ್ಯೂ: 10

ಸಾಕ್ಷಿಯನ್ನು ತಾ:- **05.04.2021** ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಮಂಚಯ್ಯ |
| ತಂದೆಯ ಹೆಸರು | ಮಂಚೆಗೌಡ |
| ವಯಸ್ಸು | 42 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಅಂಚಿಪುರ, ಮಳವಳ್ಳಿ ತಾಲ್ಲೂಕು. |

**ಮುಖ್ಯ ವಿಚಾರಣೆ: ಶ್ರೀ ಸ ಸ ಅರವರಿಂದ.**

**1.** ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ಅಮಾನತು ಮಹಜರ್ ಆಗಿದ್ದು ಅದನ್ನು ಈಗ ನಿ.ಪಿ-7 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-7 ಎ ಎಂದು ಗುರುತಿಸಲಾಯಿತು.

**2.** ಇಲ್ಲಿಗೆ 4 ವರೆ ವರ್ಷಗಳ ಹಿಂದೆ ಪೋಲೀಸರು ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಯಾವ ವಿಚಾರವಾಗಿ ನನ್ನ ಸಹಿಯನ್ನು ನಿಪಿ 7 ರಲ್ಲಿ ಪಡೆದಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ಅಮಾನತು ಮಹಜರ್ ವಿರುದ್ಧ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀಸವಾಲು: ಶ್ರೀಮತಿ ಸ.ಸ.ಅರವರಿಂದ:**

**3.** ದಿನಾಂಕ 13-05-2016 ರಂದು 2 ನೇ ಆರೋಪಿ ರವರ ಕೆ.ಎ.11-ಇಎಫ್-3431 ಸಂಖ್ಯೆಯ ಹೀರೋಹೋಂಡಾ ಪ್ಯಾಶನ್ ಪ್ರೊ ಮೋಟಾರ್ ಸೈಕಲನ್ನು

ಹಾಜರುಪಡಿಸಿದಾಗ ಅದನ್ನು ಪೋಲೀಸರು ವಶಕ್ಕೆ ಪಡೆದುಕೊಂಡು ಮದ್ಯಾಹ್ನ 2 ಗಂಟೆಯಿಂದ 3-00 ಗಂಟೆಯವರೆಗೆ ನನ್ನ ಸಮಕ್ಷಮ ನಿ.ಪಿ-7 ರ ಪ್ರಕಾರ ಮಹಜರ್ ಮಾಡಿದರು ಎಂದರೆ ಸರಿಯಲ್ಲ . ಆಗ ಹಾಜರಿದ್ದ ನಾನು ನಿ.ಪಿ-7 ರಲ್ಲಿ ಇರುವ ಅಂಶಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೆ ಆರೋಪಿ ಹಾಗೂ ಚಾಸಾ 9 ಹಾಜರಿದ್ದು ನನ್ನ ಜೊತೆ ನಿಪಿ 7 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

(ಐಶ್ವರ್ಯ ಚಿದಾನಂದ ಪಟ್ಟಣ್ ಶೆಟ್ಟಿ)
1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್.ಸಿ
ಮಳವಳ್ಳಿ